ವಿಷಯ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯ ಮನೆಗಳಿಗಾಗಿ ಬಿಡುಗಡೆ ಮಾಡಿದ ಅನುದಾನ.

1115 (1566)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿಯಲ್ಲಿನ ಮನೆಗಳಿಗಾಗಿ 1997-98ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ತಾಲ್ಲೂಕುವಾರು ಬಿಡುಗಡೆ ಮಾಡಿದ ಹಣದ ಮೊತ್ತ ಎಷ್ಟು?

ಆ) ಆಶ್ರಯ ಸಮಿತಿಯಿಂದ ಆಯ್ಕೆಗೊಳಿಸಿದ ಕೆಲವು ಫಲಾನುಭವಿಗಳಿಗೆ ಸರ್ಕಾರಿ ಜಮೀನು ಇದ್ದು ಹಕ್ಕುಪತ್ರ ಸಿಗದೇ ಇರುವುದರಿಂದ ಮಂಜೂರಾತಿ ನೀಡಲು ಕಷ್ಟವಾಗುವುದರಿಂದ ಈ ಬಗ್ಗೆ ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಲಿದೆ.

ಇ) ಫಲಾನುಭವಿಗಳಿಗೆ ವಿತರಿಸಿದ ಮನೆಗಳ ನಿರ್ಮಾಣಕ್ಕೆ ಹಣವನ್ನು ಪಡೆಯಲು ವಿಳಂಬವಾಗುವುದರ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಕಾಲದಲ್ಲಿ ಅಂತಹ ಹಣವನ್ನು ಬಿಡುಗಡೆ ಮಾಡಿ ಅರ್ಹ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ)

		ಆಶ್ರಯ (ರೂ. ಲಕ್ಷಗಳಲ್ಲಿ)	ಅಂಬೇಡ್ಕರ್ (ರೂ. ಲಕ್ಷಗಳಲ್ಲಿ)
1.	ಮಂಗಳೂರು	15.000	15.950
2.	ಬಂಟ್ವಾಳ	14.000	21.090
3.	ಪುತ್ತೂರು	12.330	27.010
4.	ಸುಳ್ಯ	12.200	19.340
5.	ಬೆಳ್ತಂಗಡಿ	12.300	35.200
6.	ಕಾರ್ಕಳ	14.000	40.520

7.	ಕುಂದಾಪುರ	14.000	27.070
8.	ಉಡುಪಿ	20.000	44.520
	ಒಟ್ಟು	113.830	230.70

ಆ) ಆಶ್ರಯ ಸಮಿತಿಯಿಂದ ಆಯ್ಕೆಯಾದ ಫಲಾನುಭವಿಗಳಿಗೆ ಸ್ವಂತ ಜಮೀನಿದ್ದಲ್ಲಿ ಮನೆ ರಚಿಸಲು ಮಂಜೂರಾತಿ ನೀಡಲಾಗುವುದು. ಸರ್ಕಾರಿ ಜಮೀನಿನಲ್ಲಿ ಅವರಿಗೆ ಹಕ್ಕುಪತ್ರ ಸಿಕ್ಕದ ನಂತರವೇ ಮನೆ ಮಂಜೂರಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಸರ್ಕಾರಿ ಜಮೀನನ್ನು ಕಂದಾಯ ಇಲಾಖೆಯಿಂದ ಹಸ್ತಾಂತರಿಸಿದ ನಂತರ ಫಲಾನುಭವಿಗಳಿಗೆ ಮಂಜೂರು ಮಾಡಲಾಗುವುದು.

ಇ) ಅರ್ಹ ಫಲಾನುಭವಿಗಳನ್ನು ಆಶ್ರಯ ಸಮಿತಿಯಲ್ಲಿ ಆಯ್ಕೆ ಮಾಡಿದ ನಂತರ ಮನೆಗಳನ್ನು ರಚಿಸಲು ವಿಳಂಬವಿಲ್ಲದೇ ಆದೇಶ ನೀಡಿ ಮನೆಗಳ ಪ್ರಗತಿಯನ್ನು ಅಂದರೆ ಪಂಚಾಂಗ, ಗೋಡೆ, ಮಾಡು ಮತ್ತು ಸಾರಣೆ ಮಾಡಿದ ಬಗ್ಗೆ ಹಂತ ಹಂತವಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ. ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು ಹಾಗೂ ಸಂಬಂಧಪಟ್ಟ ಕಿರಿಯ ಇಂಜಿನಿಯರುಗಳಿಂದ ದೃಢೀಕರಣ ಪತ್ರವನ್ನು ಪಡೆದು ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಿ ಪ್ರಗತಿ ಸಾಧಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಮನೆಗಳ ಕಾಮಗಾರಿಯನ್ನು ಪರಿಶೀಲಿಸಿ ವಿಳಂಬವಿಲ್ಲದೇ ಹಣ ಪಾವತಿಸಲಾಗುತ್ತಿದೆ.

ವಿಷಯ: ಸಂತೇಮಾರನ ಹಳ್ಳಿಯಲ್ಲಿ ಬಸ್‌ನಿಲ್ದಾಣ

1116 (1587)

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಸಂತೇಮಾರನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಸರ್ಕಾರಿ ಬಸ್ಸುಗಳು ಸಂಚರಿಸುತ್ತಿವೆ.

ಆ) ಹಾಲಿ ಮಂಜೂರಾತಿಯಾಗಿರುವ ಮಾರ್ಗಗಳು ಎಷ್ಟು?

ಇ) ಹೊಸದಾಗಿ ಸಂತೇಮಾರನಹಳ್ಳಿ ಕೇಂದ್ರ ಸ್ಥಾನದಲ್ಲಿ ಕ.ರಾ.ರ.ಸಾ.ಸಂಸ್ಥೆ ಬಸ್ ನಿಲ್ದಾಣ ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):